ಶ್ರೀ ಸಿದ್ದಯ್ಯ ಕಾಶೀಮಠ.—ಅನುಭವ ಪಡೆದ ಅಸಿಸ್ಟೆಂಟ್ ಕಮಿಷನರುಗಳನ್ನು ಆದಷ್ಟು ಮಟ್ಟಿಗೂ ಅಕಾರ ಇರಾಖೆಗೆ ಹಾಕಿ ಅಲ್ಲಿ ಕೆಲಸಮಾಡುತ್ತಿರುವ ಪ್ರೊಬೇಷನರಿ ಅಧಿಕಾರಿಗಳನ್ನು ಸಬ್ ಡಿವಿಜನ್‌ಗಳಿಗೆ ಹಾಕುವುದಕ್ಕೆ ಸರ್ಕಾರದವರು ಮನಸ್ಸು ಮಾಡುತ್ತಾರೆಯೇ ಸ್ವಾಮಿ ?

ಶ್ರೀ ನಿಜಲಿಂಗಪ್ಪ.—ಇಲ್ಲಿ ಕೇಳಿರುವುದು ವೇಕೆನ್ಸಿ ವಿಚಾರ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈಗ ಇರುವಂತ ಅಸಿಸ್ಟೆಂಟ್ ಕಮಿಷನರುಗಳು ಮತ್ತು ತಹಸೀಲ್ದಾರರು ಇವರುಗಳು ನಿವೃತ್ತರಾದ ಮೇರೆ ಕೆಲವು ಜಾಗಗಳನ್ನು ಭರ್ತಿಮಾಡದೆ ಇರುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ಸ್ವಾಮಿ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಒಂದು ನೂಡನೆ ಸ್ವಾಮಿ.

Removal of Slum Area at Gadag-Betgeri

*Q.—387. Sri K. P. GADAG (Gadag).—

Will the Government be pleased to state.—

(*a*) whether they are aware that thousands of people are residing in an unhealthy low level slum area at Gadag—Betgeri ;

(*b*) whether any action has been taken for the removal of this slum area ?

*A.—Sri K. PUTTASWAMY (Minister for Municipal Administration).—

(*a*) Yes.

(*b*) The question of removing the slum is under the consideration of Gadag-Betgeri Municipality.

Sri K. P. GADAG.—May I know in what stage the question of removing the slum of Gadag-Betgeri is ?

Sri K. PUTTASWAMY.—Sir, that question is under the consideration of the Municipality now. The Commissioner of Endowments has agreed and approved of the proposal of the Municipality to take the land on a lease for 99 years on 3,000 rupees rent per annum.

Sri K. P. GADAG.—May I know whether it has been accepted by the Government ?

Sri K. PUTTASWAMY.—I think the Muzrai Commissioner has approved of it and it is within his power.

Sri SIDDIAH KASIMATH.—May I know whether the Gadag-Betgeri Municipality has asked for any loan for removing this slum area ?

Sri K. PUTTASWAMY.—Under the slum clearance scheme, amounts should be made available.

Sri K. P. GADAG.—May I know whether all the works of the slum clearance are know held up due to Supreme Court judgement.

Sri K.PUTTASWAMY.—Sir, the question pertains only to this particular slum and I have answered. There has been a judicial pronouncement striking down certain provisions of the Slum Clearance Act. That matter is being examined at the Government level.

ಶ್ರೀ ಸಿದ್ದಯ್ಯ ಕಾಶಿಮಠ.—ಈ ಕೊಳಚೆ ಬಹುವರ್ಷಗಳಿಂದ ಇದ್ದು ಅಲ್ಲಿ ಜನ ವಾಸಮಾಡುತ್ತ ಇರುವುದರಿಂದ ಅದರ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳುವಂತೆ ಗದಗ-ಬೆಟಗೇರಿ ಮುನಿಸಿಪಾಲಿಟಿಗೆ ಸಲಹೆ ಕೊಡುತ್ತಾರೆಯೇ ಸ್ವಾಮಿ ?

Sri K. PUTTASWAMY.—Sir, there is absolutely no difference of opinion that this slum requires immediate clearance; but it is a human problem and it takes time.

Sri T. MADIAH GOWDA.—Since how long this slum area is in existance in Gadag-Betgeri?

ಶ್ರೀ ಕೆ. ಪುಟ್ಟಸ್ವಾಮಿ.—ಇದು ಒಂದು ಚರಿತ್ರೆ ಇದ್ದ ಹಾಗೆ ಇದೆ. ಇದು ಬಹಳ ದಿನಗಳಿಂದ ಇದೆ. ಗದುಗಿನ ಲಕ್ಷ್ಮೀನಾರಾಯಣ ಸ್ವಾಮಿ ದೇವಸ್ಥಾನಕ್ಕೆ ಸೇರಿದ ಜಮೀನು ಅದು.

Bheema Major Irrigation Project.

*Q.—569. Sri MAHANTHASWAMY (Shahpur).—

Will the Government be pleased to state :—

(*a*) the five—year plan in which the Bheema Major Irrigation Project has been included;

(*b*) the estimated cost of the same;

(*c*) when they would take up the same?

A.—Sri S. NIJALINGAPPA (Chief Minister).—

(*a*) The Project is under investigation and has not been included in any five-year plan.

(*b*) and (*c*) Do not arise.

ಶ್ರೀ ಮಹಂತಸ್ವಾಮಿ.—(ಅ) ಭಾಗಕ್ಕೆ ಉತ್ತರವಾಗಿ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಯಾವ ಹಂತದಲ್ಲಿದೆ ಎಂದು ಹೇಳುತ್ತಾರೆಯೇ ಸ್ವಾಮಿ?

ಶ್ರೀ ಎಸ್. ನಿಜಲಿಂಗಪ್ಪ.—ಪರಿಶೀಲನೆಯಲ್ಲಿ ಎಂದರೆ ಪ್ರಾಜೆಕ್ಟನ್ನು ಎಲ್ಲಿ ಕಟ್ಟುವುದಕ್ಕೆ ಸಾಧ್ಯವಿದೆ, ಎಷ್ಟು ಖರ್ಚಾಗುತ್ತದೆ, ಎಷ್ಟು ನೀರಾವರಿಯಾಗಬಹುದು, ಎಲ್ಲ ಕಾಲುವೆಗಳನ್ನು ತಗೆಯಬಹುದು, ಯಾವುದನ್ನು ಉಪಯೋಗಿಸಬೇಕು, ಮಣ್ಣನ್ನು ಉಪಯೋಗಿಸಬೇಕೇ, ಕಲ್ಲನ್ನು ಉಪಯೋಗಿಸಬೇಕೇ ಅಥವಾ ಸಿಮೆಂಟನ್ನು ಉಪಯೋಗಿಸಬೇಕೇ ಎಂಬುದನ್ನು ನೋಡಬೇಕು. ಇದೆಲ್ಲ ಪರಿಶೀಲನೆಯಲ್ಲಿದೆ.

ಶ್ರೀ ಎಸ್. ಎಂ. ಕೃಷ್ಣ.—ಇದಕ್ಕೆ ಎಸ್ಟಿಮೇಟ್ ಏನಾದರೂ ಮಾಡಿದ್ದಾರೆಯೇ ಸ್ವಾಮಿ?

ಶ್ರೀ ಎಸ್. ನಿಜಲಿಂಗಪ್ಪ.—ವ್ಯಾರಂಭಿಕವಾಗಿ ಹತ್ತೂವರೆ ಕೋಟಿ ರೂಪಾಯಿ ಆಗಬಹುದು ಎಂದು ಅಂದಾಜಾಗಿದೆ. ಒಂದು ಲಕ್ಷ ಎಕರೆ ಸಾಗು ಆಗಬಹುದು.

ಶ್ರೀ ಮಹಂತಸ್ವಾಮಿ.—ಈ ಯೋಜನೆಗೆ ನಿವೇಶನವೇನಾದರೂ ಸರ್ಕಾರದವರು ನಿರ್ಧಾರ ಮಾಡಿದ್ದಾರೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಗುಲ್ಬರ್ಗದಲ್ಲಿ ತಂಗಡಿ ಎಂಬ ಒಂದು ಹಳ್ಳಿ ಇದೆ. ಅದರ ಹತ್ತಿರ ಅಥವಾ ಮೇಲ್ಕಡೆ ಹೋಗಬಹುದು ಎಂದು ನಮ್ಮ ಅಭಿಪ್ರಾಯ.

ಶ್ರೀ ಬಿ. ವಿ. ಮಾಗಾವಿ.—ಮಹಾರಾಷ್ಟ್ರದವರು ಈ ಭೀಮಾ ನದಿಗೆ ಈಗಾಗಲೇ ಒಂದು ಯೋಜನೆಯನ್ನು ಇಟ್ಟಿರುವುದರಿಂದ ನಮ್ಮ ರಾಜ್ಯಕ್ಕೆ ಇದರಿಂದ ಕಡಿಮೆ ನೀರು ಸರಬರಾಯಿ ಆಗಬಹುದಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ಭೀಮಾ ನದಿಗೆ ಅವರು ಯೋಜನೆ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಬಿ. ವಿ. ಮಾಗಾವಿ.—ಅವರಲ್ಲ ಅಪ್ಪರ್ ಭೀಮಾ ಯೋಜನೆ ಇದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ವಿಚಾರಮಾಡಬೇಕು.

ಶ್ರೀ ಎಸ್. ಎಂ. ಕೃಷ್ಣ.—ಉತ್ತರದಲ್ಲಿ, ಯಾವ ಪಂಚವಾರ್ಷಿಕ ಯೋಜನೆಯಲ್ಲೂ ಈ ಯೋಜನೆ ಸೇರಿಲ್ಲವೆಂದು ಹೇಳಿದೆ. ಅಂದ ಮೇಲೆ ಪಂಚವಾರ್ಷಿಕ ಯೋಜನೆಯಲ್ಲಿ ಎಲ್ಲಾ ಇರಿಗೇಷನ್ ಪ್ರಾಜೆಕ್ಟುಗಳನ್ನು ಪ್ರಾರಂಭ ಮಾಡಿಲ್ಲವೇ?